Sri K. MALLAPPA.—It is obvious that it is in the public sector.

ಶ್ರೀ ಇ. ನಾರಾಯಣ ಗೌಡ.—ಚಿನ್ನದ ಗಣಿಪ್ರದೇಶದಲ್ಲಿ ಕೆಲಸ ಕಳೆದುಕೊಳ್ಳತಕ್ಕವರು ಸ್ಕಿರ್ಟ್ ಲೇಬರುಗಳಲ್ಲ. ಅವರಿಗೆ ತರಬೇತಿ ಕೊಡಲು ಏನು ವ್ಯವಸ್ಥೆ ಮಾಡಿದ್ದೀರಿ ?

ಶ್ರೀ ಕೆ. ಮಲ್ಲಪ್ಪ.—ಎಲ್ಲ ತರಹೆಯ ಜನರೂ ಇರುತ್ತಾರೆ. ಅವರವರಿಗೆ ತಕ್ಕ ಹಾಗೆ ಕೆಲಸಗಳನ್ನು ಒದಗಿಸಲಾಗುತ್ತದೆ.

Sri S.RAJAGOPAL.—Is it the intention of the State Government to start industries in K.G.F.....

Mr. SPEAKER.—The Hon'ble Member is going off the track. He is asking a particular question. As regard supplementaries—I do appeal to the members to ask as many as they like consistent with the time. But they should be proper supplementaries. Any other thing may be a good point for the debate on the Budget.

1-00 P. M.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕೆ. ಜಿ. ಎಫ್. ಗಣಿ ಮುಚ್ಚುವುದರಿಂದ ಅಲ್ಲಿ ಕೆಲಸವನ್ನು ಕಳೆದುಕೊಳ್ಳುವವರಿಗೆಲ್ಲಾ ಈ ಕಾರ್ಖಾನೆಯಲ್ಲಿ ಕೆಲಸಗಳನ್ನು ಒದಗಿಸಲು ಸರಕಾರ ಏರ್ಪಾಡು ಮಾಡುತ್ತದೆಯೇ ?

ಶ್ರೀ ಕೆ. ಮಲ್ಲಪ್ಪ.—ಎಲ್ಲವನ್ನೂ ಗಮನದಲ್ಲಿಟ್ಟುಕೊಂಡು ಈ ಫ್ಯಾಕ್ಟರಿಯು ಆರಂಭವಾದ ಮೇಲೆ ತಕ್ಕ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಈ ಕಾರ್ಖಾನೆಯನ್ನು ಬಂಗಾರಪೇಟೆಗೂ, ಕೆ. ಜಿ. ಎಫ್. ಗೂ ಮಧ್ಯದಲ್ಲಿ ಸ್ಥಾಪನೆ ಮಾಡಬೇಕು ಎಂದು ಸರಕಾರಕ್ಕೇನಾದರೂ ಮನವಿಗಳು ಬಂದಿವೆಯೇ ?

ಶ್ರೀ ಕೆ. ಮಲ್ಲಪ್ಪ.—ಮನವಿಗಳು ಬಂದಿಲ್ಲ. ಇದನ್ನು ಕೇಂದ್ರ ಸರಕಾರದ ಟೆಕ್ನಿಕಲ್ ಕಮಿಟಿಯವರು ತಮ್ಮ ಎಕ್ಸ್‌ಪರ್ಟುಗಳಿಂದ ಪರಿಶೀಲಿಸುತಿದ್ದಾರೆ ಮತ್ತು ಇನ್ನೂ ಯಾವ ಸೈಟಿನಲ್ಲಿ ಮಾಡಬೇಕೆನ್ನುವುದು ನಿರ್ಧರವಾಗಿಲ್ಲ.

ಶ್ರೀ ಎಸ್. ಶಿವಪ್ಪ.—ಕೋಲಾರದ ಚಿನ್ನದ ಗಣಿಯನ್ನು ಮುಚ್ಚುವುದರಿಂದ ನಿರುದ್ಯೋಗಿಗಳಾಗುವ ಕಾರ್ಮಿಕರನ್ನೆಲ್ಲಾ ಹಟ್ಟಿಯಲ್ಲಿರುವ ಚಿನ್ನದ ಗಣಿಯಲ್ಲಿ ಅವರಿಗೆ ಕೆಲಸಗಳನ್ನು ದೊರಕಿಸಬೇಕು ಎನ್ನುವ ಯೋಚನೆಯನ್ನೇನಾದರೂ ಇಟ್ಟುಕೊಂಡಿದ್ದೀರಾ ?

ಶ್ರೀ ಕೆ. ಮಲ್ಲಪ್ಪ.—ಆ ಪ್ರಶ್ನೆ ಇನ್ನೂ ಬಂದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಕಾರ್ಖಾನೆ ಇಲ್ಲಿ ಸ್ಥಾಪಿತವಾಗುವುದರಿಂದ ಮೈಸೂರು ಸರಕಾರದ ಹಿತ ಮತ್ತು ಕಂಜೂರ್ಸೂ ಏನು ಇರುತ್ತದೆ ?

ಶ್ರೀ ಕೆ. ಮಲ್ಲಪ್ಪ.—ಮೈಸೂರು ಸರಕಾರ ಭೂಮಿ ದೊರಕಿಸಿಕೊಡುವುದು ಮತ್ತು ನೀರನ್ನು ಕೊಡುವುದರಿಂದ ಅದಕ್ಕಾಗುವ ಖರ್ಚನ್ನು ಕೊಡುತ್ತಾರೆ, ಪವರು ಕೊಡುವುದರಿಂದ ಅದರ ಖರ್ಚನ್ನೂ ಕೊಡುತ್ತಾರೆ ಮತ್ತು ಇದಕ್ಕಾಗಿ ಇನ್ನೇನಾದರೂ ಖರ್ಚು ಬಂದರೆ ಅದನ್ನೂ ಕೊಡುತ್ತಾರೆ.

Filling up of the Post of Assistant Deputy Education Inspectors in Belgaum District.

* *Q.*—993. Sri N. O. SAMAJI (Belgaum-II).—

Will the Government be pleased to state :—

(*a*) whether they have issued instructions to the Officers concerned to fill up the post of Assistant Deputy Educational Inspectors in Belgaum District ;

(*b*) if so, how many posts have since been filled up and when (information may be furnished language-wise, *i. e.*, Kannada, Marathi and Urdu) ;

(*c*) the number of Primary School Teachers who have since been appointed for the above posts;

(*d*) whether the said appointments are according to the percentage laid down by the Government for the purpose;

(*e*) the rules followed while filling up the above posts;

(*f*) whether there are any posts still vacant and if so, when they are likely to be filled up;

(*g*) whether there are any proposals for the same?

A.—**Sri S. R. KANTHI** (Minister for Education).—

(*a*) No.

(*b*), (*c*) and (*d*) Does not arise in view of reply to clause (*a*) above.

(*e*) 35 per cent of the posts of Assistant Deputy Educational Inspectors in each district are filled up from the Primary Teachers' Cadre. 65 per cent of the posts are filled up by transfer of Graduate Assistant Masters working in Government Secondary Schools and Training Institutions.

(*f*) There are two posts to be filled up by transfer of Graduate Assistant Masters. Action is being taken to fill up these posts early.

(*g*) Yes.

Sri N. O. SAMAJI.—(Marathi).

†ಶ್ರೀ ಎಸ್. ಆರ್. ಕಂಠಿ.—ಅವರು ಹೇಳುವ ಹಾಗೆ ಇದರಲ್ಲಿ ಇಲ್ಲ. ಇಲ್ಲಿ 39 ಜಾಗಗಳಿವೆ. ಮುಂಬಯಿ ಸರ್ಕಾರದಲ್ಲಿ ಹಿಂದೆ ಇದ್ದ ಪದ್ಧತಿ ಮಾನ್ಯ ಸದಸ್ಯರಿಗೂ ಗೊತ್ತಿದೆ. ಇಲ್ಲಿ ಒಂದು ಮರಾಠಿ ಮತ್ತು ಒಂದು ಉರ್ದು ಜಾಗ ಮಾತ್ರ ಇದೆ.

Sri B. R. SUNTHANKAR.—May I know what is the proportion of the ADEI to schools in the case of Marathi schools and Kannada schools?

Sri S. R. KANTHI.—Please ask a separate question.

Sri B. R. SUNTHANKAR.—Because our grievance is.....

Mr. SPEAKER.—The House is aware that he has a grievance. But does it come under this question?

Sri B. R. SUNTHANKAR.—The intention in asking this question was that. I want to know whether it has come to the notice of the Government that there is a grievance in the Marathi areas that the Marathi schools have not got a sufficient number of ADEI?

ಶ್ರೀ ಎಸ್. ಆರ್. ಕಂಠಿ.—ಮರಾಠಿ ಏರಿಯಾ ಮತ್ತು ಕನ್ನಡದ ಏರಿಯಾ ಎಂದು ಹೇಳುವುದು ಸರಿಯಲ್ಲ. ಎಲ್ಲ ಏರಿಯಾದಲ್ಲೂ ಶಾಲೆಗಳಿವೆ. ಕನ್ನಡದ ಏರಿಯಾದೊಳಗೆ ಮರಾಠಿ ಶಾಲೆಗಳಿವೆ ಹಾಗೂ ಮರಾಠಿ ಏರಿಯಾದೊಳಗೂ ಕನ್ನಡದ ಶಾಲೆಗಳು ಇವೆ. ಮೈನಾರಿಟಿಯವರಿಗೆ ಪ್ರೊಟೆಕ್ಷನ್ನು ಕೊಡಬೇಕೆಂದು ಕೆಲವು ಕಡೆ ಮರಾಠಿ ಶಾಲೆಗಳಿವೆ. ಇದರಲ್ಲಿ ಆ ಪ್ರಶ್ನೆಯನ್ನು ಕೇಳುವುದು ಸರಿಯಲ್ಲ.